ಆಗಸ್ಟ್ 16, 2004

**ಬ್ಯಾಂಕ್ ಗ್ರಾಹಕರಿಗೆ ಈಗ ಆರ್‌ಟಿಜಿಎಸ್ ಸೇವೆಗಳು**

ಭಾರತೀಯ ರಿಸರ್ವ್ ಬ್ಯಾಂಕು ತನ್ನ **ರಿಯಲ್ ಟೈಮ್ ಗ್ರಾಸ್ ಸೆಟ್ಲ್‌ಮೆಂಟ್** (ಆರ್‌ಟಿಜಿಎಸ್) ವ್ಯವಸ್ಥೆಯನ್ನು ಇಂದು ಘೋಷಿಸಿದ್ದು, ಈ ಯೋಜನೆಯಲ್ಲಿ, ಭಾಗವಹಿಸುವ ಬ್ಯಾಂಕಿನಲ್ಲಿ 'ನೇರ ಪ್ರಕ್ರಿಯೆ'ಯ ಮೂಲಕ ಗ್ರಾಹಕರ ವ್ಯವಹಾರಗಳನ್ನು ನಿರ್ವಹಿಸಲಾಗುತ್ತದೆ. ಗ್ರಾಹಕ ವ್ಯವಹಾರಗಳನ್ನು ನೇರ ಪ್ರಕ್ರಿಯೆಯ ಮೂಲಕ ನಿರ್ವಹಿಸುವ ವಿಧಾನದಲ್ಲಿ, ಜಮೆಯ ವಿವರಗಳು ಸ್ವೀಕೃತವಾದ ತರುವಾಯ, ಯಾವುದೇ ಮಾನವಿಕ ಶ್ರಮದ ಮಧ್ಯಪ್ರವೇಶವಿಲ್ಲದೇ ಗ್ರಾಹಕನ ಖಾತೆಗೆ ಹಣ ನೇರವಾಗಿ ಜಮೆಯಾಗುತ್ತದೆ. ಸ್ಟಾಕ್ ವಿನಿಮಯ ಕೇಂದ್ರಗಳ ವಿಷಯದಲ್ಲಿ ಟಿ + 1 ಇತ್ಯರ್ಥವನ್ನು ಪ್ರಾರಂಭಿಸಲು ಸಾಧ್ಯವಾಗುತ್ತದೆ. ಆರ್‌ಟಿಜಿಎಸ್ ಯೋಜನೆಯಲ್ಲಿ ಭಾಗವಹಿಸಿರುವ 72 ಬ್ಯಾಂಕುಗಳ ಪೈಕಿ ಮೂವತ್ತೆರಡು ಬ್ಯಾಂಕುಗಳಲ್ಲಿ, ದೇಶಾದ್ಯಂತ ಇರುವ 134 ಮುಖ್ಯ ಕೇಂದ್ರಗಳ 840 ಶಾಖೆಗಳ ಮೂಲಕ ದೇಶದಲ್ಲಿನ ಒಟ್ಟು ಬ್ಯಾಂಕಿಂಗ್ ವ್ಯವಹಾರವನ್ನು ಗಣನೆಗೆ ತೆಗೆದುಕೊಂಡು ಗ್ರಾಹಕರಿಗೆ ಸಂಬಂಧಿಸಿದ ಆರ್ ಟಿಜಿಎಸ್ ಹಣ ವರ್ಗಾವಣೆ ಸೇವೆಯನ್ನು ಒದಗಿಸಲಾಗುತ್ತದೆ.

ಜಮೆಯನ್ನು ಸ್ವೀಕರಿಸುವ ಬ್ಯಾಂಕು, ತನ್ನ ಪಾವತಿ ವ್ಯವಸ್ಥಾ ಸ್ಥಳದಲ್ಲಿ ಜಮಾ ಅಧಿಸೂಚನೆಯನ್ನು ಸ್ವೀಕರಿಸಿದ ಎರಡು ಗಂಟೆಗಳೊಳಗೆ ಫಲಾನುಭವಿ ಗ್ರಾಹಕನ ಖಾತೆಗೆ ಜಮೆ ತೋರಿಸುವುದು ಕಡ್ಡಾಯವಾಗಿರುತ್ತದೆ ಎಂದು ರಿಸರ್ವ್ ಬ್ಯಾಂಕು ತಿಳಿಸಿದೆ. ಗ್ರಾಹಕರಿಗೆ ಆಯಾ ದಿನಾಂಕಗಳಂದು ಇದ್ದಂತೆ ಆರ್‌ಟಿಜಿಎಸ್ ಸೇವೆ ಒದಗಿಸುವ ಬ್ಯಾಂಕ್ ಶಾಖೆಗಳ ಪಟ್ಟಿಯು, ಬ್ಯಾಂಕ್ ಗ್ರಾಹಕರ ಪ್ರಯೋಜನಕ್ಕಾಗಿ, ಆರ್‌ಟಿಜಿಎಸ್ ಲಿಂಕ್ ಅಡಿ ಆರ್‌ಬಿಐ ವೆಬ್‌ಸೈಟ್ (www.rbi.org.in)ನಲ್ಲಿ ಲಭ್ಯವಿರುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕಿನ ಆರ್‌ಟಿಜಿಎಸ್ ಯೋಜನೆಯು 2004ರ ಮಾರ್ಚ್ 26ರಂದು ಬಿಡುಗಡೆಯಾದುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಪ್ರಾರಂಭದಲ್ಲಿ ಇದು ಬ್ಯಾಂಕುಗಳ ನಡುವಣ ವ್ಯವಹಾರಗಳ ಇತ್ಯರ್ಥಕ್ಕೆ ಮುಕ್ತವಾಗಿತ್ತು. 2004ರ ಏಪ್ರಿಲ್ 29ರಿಂದ ಗ್ರಾಹಕರ ವಹಿವಾಟುಗಳ ಇತ್ಯರ್ಥಕ್ಕೂ ವಿಸ್ತೃತಗೊಂಡಿತು. ಆರ್‌ಟಿಜಿಎಸ್ ವ್ಯವಸ್ಥೆಯು, ವ್ಯವಸ್ಥೆ ರೀತ್ಯ ಮಹತ್ವಪೂರ್ಣ ಹಣ ಪಾವತಿ ವ್ಯವಸ್ಥೆಯಾಗಿದ್ದು ದೇಶದಲ್ಲಿನ ಬ್ಯಾಂಕಿಂಗ್ ಹಾಗೂ ಹಣಕಾಸು ವಲಯವನ್ನು ಒಳಗೊಳ್ಳುತ್ತದೆ. ಇದೊಂದು ಸುರಕ್ಷಿತ ವಿದ್ಯುನ್ಮಾನ ಹಣ ವರ್ಗಾವಣೆ ವ್ಯವಸ್ಥೆಯಾಗಿದ್ದು, ಅಂತರ್‌ಬ್ಯಾಂಕು ವ್ಯವಹಾರಗಳು ಹಾಗೂ ಗ್ರಾಹಕ ಆಧಾರಿತವಾದ ಅಂತರ್‌ಬ್ಯಾಂಕು ವ್ಯವಹಾರಗಳ ಸಂಬಂಧದಲ್ಲಿ ದೇಶಾದ್ಯಂತ ಯಾವುದೇ ಮೊತ್ತಕ್ಕೆ ಸಮಯೋಚಿತ ಆನ್ ಲೈನ್ (ತಕ್ಷಣದ) ಇತ್ಯರ್ಥವನ್ನು ಒದಗಿಸುತ್ತದೆ. ದೇಶದಲ್ಲಿನ ಎಲ್ಲ ಅನುಸೂಚಿತ ಬ್ಯಾಂಕುಗಳು ಆರ್‌ಟಿಜಿಎಸ್ ಯೋಜನೆಯಲ್ಲಿ ಪಾಲ್ಗೊಂಡು, ತಮ್ಮ ಗ್ರಾಹಕರಿಗೆ ವಿದ್ಯುನ್ಮಾನ ಹಣ ವರ್ಗಾವಣೆ ಸೌಲಭ್ಯವನ್ನು ಒದಗಿಸಬಹುದು. ಪ್ರಸ್ತುತ, 72 ಬ್ಯಾಂಕುಗಳು ಅಂತರ್‌ಬ್ಯಾಂಕು ಇತ್ಯರ್ಥಕ್ಕಾಗಿ ಆರ್‌ಟಿಜಿಎಸ್ ಯೋಜನೆಯಲ್ಲಿ ಪಾಲ್ಗೊಂಡಿದ್ದು, ಇದರಿಂದ ಮುಂಬೈಯಲ್ಲಿ ಒಟ್ಟು ಅಂತರ್‌ಬ್ಯಾಂಕು ಹಣಕಾಸು ಇತ್ಯರ್ಥದ ಶೇಕಡಾ 90ರಷ್ಟು ವ್ಯವಹಾರದ ಲೆಕ್ಕವಿಡಲಾಗುತ್ತದೆ.

ಅಲ್ಪನಾ ಕಿಲ್ಲಾವಾಲಾ
ಮುಖ್ಯ ಪ್ರಧಾನ
ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2004–2005/188